**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ, ದಾವಣಗೆರೆ**

SC. No.40/2024

| ಫಿರ್ಯಾದಿದಾರರು | ವಿರುದ್ಧ | ಆರೋಪಿತರು |
|---|---|---|
| ರಾಜ್ಯದ ಪರವಾಗಿ ದಾವಣಗೆರೆ ಬಡಾವಣೆ ಪೊಲೀಸ್ ಠಾಣೆ, ದಾವಣಗೆರೆ | | ವಿನಯ್ ಹೆಚ್.ಪಿ. ತಂದೆ ಪ್ರಕಾಶ್ ಹೆಚ್.ಪಿ. ವಯಸ್ಸು 39 ವರ್ಷ, ವಾಸಃ ನಂ.743/1, 10 ನೇ ಮೇನ್, 6 ನೇ ಕ್ರಾಸ್, ಪಿಜೆ ಬಡಾವಣೆ, ದಾವಣಗೆರೆ |

**ದಂಡ ಪ್ರಕ್ರಿಯಾ ಸಂಹಿತೆ ಕಲಂ. 313 ರ ಅಡಿಯಲ್ಲಿ ಆರೋಪಿತನ ಹೇಳಿಕೆ ಮತ್ತು ವಿಚಾರಣೆ**

ಪ್ರಶ್ನೆ -1 ಈ ನ್ಯಾಯಾಲಯದಲ್ಲಿ ಅಭಿಯೋಜನೆ ಪರ ಮಾಡಿದ ಸಾಕ್ಷಿಗಳ ಹೇಳಿಕೆಗಳನ್ನು ನೀನು ಕೇಳಿದ್ದೀಯಾ?

ಉತ್ತರಃ

ಪ್ರಶ್ನೆಃ 2 ಈ ಪ್ರಕರಣದಲ್ಲಿ ಪ್ರಾ.ಸಾ.1 ಡಾ.ಪ್ರವೀಣಾ ಶರ್ಮಾ ಇವರು ತಮ್ಮ ಸಾಕ್ಷ್ಯದಲ್ಲಿ ತಾನು ಶಿವಮೊಗ್ಗದಲ್ಲಿ ಕೆಲಸಕ್ಕೆ ಹೋಗುವ ಪೂರ್ವದಲ್ಲಿ ದಾವಣಗೆರೆಯಲ್ಲಿ ತನ್ನ ಗಂಡನ ಜೊತೆ ತನ್ನ ಒಂದು ವರ್ಷದ ಮಗು, ತನ್ನ ಅತ್ತೆ ಮತ್ತು ಮಾವನ ಜೊತೆ ವಾಸವಾಗಿದ್ದೆ. ಆ ಸಮಯದಲ್ಲಿ ಆರೋಪಿಯಾದ ನೀನು ಕೂಡ ಅದೇ ಮನೆಯಲ್ಲಿ ಇರುತ್ತಿದ್ದು, ಆರೋಪಿಯಾದ ನೀನು ಆ ಸಮಯದಲ್ಲಿ ಎಲ್ಲಿಯೂ ಕೆಲಸಕ್ಕೆ ಹೋಗದೆ ಮನೆಯಲ್ಲಿಯೇ ಇರುತ್ತಿದ್ದು, ನೀನು ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡಿರುವುದಾಗಿಯೂ, ಅಲ್ಲದೇ ನೀನು ಮನೆಯಲ್ಲಿ ಎಲ್ಲರ ಜೊತೆ ಜಗಳವಾಡುತ್ತ ಇರುತ್ತಿದ್ದು, ನೀನು ತನ್ನ ಅತ್ತೆ ಮತ್ತು ಮಾವನ ಜೊತೆ ಹಣವನ್ನು ಕೇಳುತ್ತಿದ್ದು, ಅಲ್ಲದೇ ತನಗೆ ಮದುವೆ ಮಾಡಿ ಹೇಳಿಕೊಂಡು ಜಗಳವಾಡುತ್ತಿದ್ದು, ಆ ಸಮಯದಲ್ಲಿ ತಾನು ಮತ್ತು ತನ್ನ ಗಂಡ ಆರೋಪಿಯಾದ ನಿನಗೆ ಮನೆಯಲ್ಲಿ ಶಾಂತವಾಗಿ ಇರಿ ಎಂದು ಹೇಳುತ್ತಿದ್ದೆವು. ತಾವು ಆ ರೀತಿ ಹೇಳಿದರೂ ಕೂಡ ಆರೋಪಿಯಾದ ನೀನು ತಮಗೆ ಬೈಯ್ಯುತ್ತಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ -3 ಮುಂದುವರೆದು ಪ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 02-01-2024 ರಂದು ಮದ್ಯಾಹ್ನ 1-45 ಗಂಟೆ ಸಮಯದಲ್ಲಿ ತಾನು ಟಿವಿ ಹಾಕಿಕೊಂಡು ತನ್ನ ಮಗುವಿಗೆ

ಊಟ ಮಾಡಿಸುತ್ತ ಇದ್ದೆ. ನಂತರ ಆರೋಪಿಯಾದ ನೀನು ಬಂದವನೆ ಟಿವಿಯನ್ನು ಆಪ್ ಮಾಡಿದ್ದು, ತಾನು ಕೇಳಿದಾಗ ತನ್ನ ಜೊತೆ ಕೆಟ್ಟದಾಗಿ ನಡೆದುಕೊಂಡಿರುವುದಾಗಿಯೂ, ಅಲ್ಲದೇ ತನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಾಗಿಯೂ, ಅಲ್ಲದೇ ತನ್ನ ಬಲಕಣ್ಣಿನ ಕೆಳಗಡೆ ಮುಷ್ಟಿಯಿಂದ ಹಲ್ಲೆ ಮಾಡಿರುವುದಾಗಿಯೂ, ಅಲ್ಲದೇ ತನ್ನ ಮೈಕೈಯನ್ನು ಮುಟ್ಟಿ ಎಳೆದಾಡಿರುವುದಾಗಿಯೂ, ಅದನ್ನು ಗಮನಿಸಿ ತನ್ನ ಗಂಡ, ಅತ್ತೆ ಮತ್ತು ಮಾವ ನಿನ್ನನ್ನು ಹಿಡಿದು ನಿಲ್ಲಿಸಲು ಪ್ರಯತ್ನಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆಃ 4 ಮುಂದುವರೆದು ಪ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ನಂತರ ತನ್ನ ಅತ್ತೆ ಮಾವ ಆರೋಪಿಯಾದ ನಿನ್ನನ್ನು ಸಮಾಧಾನ ಪಡಿಸಿ ಒಳಗಡೆ ಕರೆದುಕೊಂಡು ಹೋದಾಗ ಆರೋಪಿಯಾದ ನೀನು ಅಲ್ಲಿ ಗಾರ್ಡನ್ ಕೆಲಸಕ್ಕಾಗಿ ತಂದಿದ್ದ ಒಂದು ಮಚ್ಚನ್ನು ತೆಗೆದುಕೊಂಡು ಬಂದು ತನ್ನ ಗಂಡನ ಬಳಿ ನಿನ್ನ ಹೆಂಡತಿಯನ್ನು ಸಾಯಿಸುತ್ತೇನೆ ಎಂದು ಹೇಳಿ ತನ್ನ ತಲೆಗೆ ಮಚ್ಚಿನಿಂದ ಹಲ್ಲೆ ಮಾಡಲು ಬಂದಿರುವುದಾಗಿಯೂ, ಆ ಸಮಯದಲ್ಲಿ ತನ್ನ ಗಂಡ ತನಗೆ ಹೊಡೆತ ಬೀಳುವುದನ್ನು ತಪ್ಪಿಸಲು ಹೋದಾಗ ಮಚ್ಚು ತನ್ನ ಗಂಡನ ಬಲಗೈಗೆ ತಾಗಿ ಗಾಯವಾಗಿದ್ದಲ್ಲದೇ, ತನ್ನ ಎಡಪಕ್ಕೆಗೆ ಮತ್ತು ತನ್ನ ಎಡಕೈಯ ಮೇಲೆ ತಾಗಿ ಗಾಯವಾಗಿರುತ್ತದೆ. ಅಲ್ಲದೇ ಆರೋಪಿಯಾದ ನೀನು ತಮ್ಮನ್ನು ಉದ್ದೇಶಿಸಿ ಸಾಯಿಸುತ್ತೇನೆ ಎಂದು ಬೆದರಿಕೆಯನ್ನು ಕೂಡ ಹಾಕಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ -5 ಮುಂದುವರೆದು ಪ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ನಂತರ ತಾವು ಚಿಗಟೇರಿ ಆಸ್ಪತ್ರೆಗೆ ಹೋಗಿ ಅಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇವೆ. ನಂತರ ಅದೇ ದಿನ ಸಂಜೆಯ ಸಮಯದಲ್ಲಿ ಬಡಾವಣೆ ಪೊಲೀಸ್ ಠಾಣೆಗೆ ಹೋಗಿ ತಾನು ಗಣಕೀಕೃತ ದೂರನ್ನು ಸಲ್ಲಿಸಿರುತ್ತೇನೆ. ಸದರಿ ದಾಖಲೆಯನ್ನು ತಾನು ಹೇಳಿದ ಪ್ರಕಾರ ಠಾಣೆಯಲ್ಲಿ ಗಣಕೀಕೃತ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆಃ 6 ಮುಂದುವರೆದು ಪ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ತಾನು ದೂರು ಸಲ್ಲಿಸಿದ ಬಳಿಕ ಮರುದಿನ ಪೋಲೀಸರು ತಮ್ಮ ಮನೆಯ ಬಳಿ ಬಂದಿರುತ್ತಾರೆ. ಆ ಸಮಯದಲ್ಲಿ ಪೋಲೀಸರ ಜೊತೆ ಇಬ್ಬರು ವ್ಯಕ್ತಿಗಳು ಕೂಡ ಬಂದಿದ್ದು, ನಂತರ ತಾನು ತೋರಿಸಿದ ಸ್ಥಳದಲ್ಲಿ ಪೋಲೀಸರು ದಾಖಲಾತಿಯನ್ನು ಬರೆದು ಸದರಿ ದಾಖಲಾತಿಗೆ ತನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಆ ಸಮಯದಲ್ಲಿ ತಾನು ಪೋಲೀಸರಿಗೆ ಆರೋಪಿಯಾದ ನೀನು ತನಗೆ ಹಲ್ಲೆ ಮಾಡಲು ಉಪಯೋಗಿದ ಮಚ್ಚನ್ನು ಅಲ್ಲದೇ ಘಟನಾ ಸ್ಥಳವನ್ನು ಹಾಗೂ ತಾನು ಘಟನೆಯ ಸಮಯದಲ್ಲಿ ಧರಿಸಿದ್ದ ಚೂಡಿ ಟಾಪನ್ನು ಕೂಡ ನೀಡಿದ್ದು, ಅವುಗಳನ್ನು ಕೂಡ ಪೋಲೀಸರು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ**?**

ಉತ್ತರಃ

ಪ್ರಶ್ನೆಃ 7 ಮುಂದುವರೆದು ಪ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಸಾಕ್ಷಿಯು ಮು.ಮಾ.1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ. ಆ ಸಮಯದಲ್ಲಿ ಪೋಲೀಸರು ಘಟನಾ ಸ್ಥಳವನ್ನು ತೋರಿಸಿದ ಕುರಿತು ಪೋಟೋಗಳನ್ನು ತೆಗೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ **?**

ಉತ್ತರಃ

ಪ್ರಶ್ನೆಃ 8 ಮುಂದುವರೆದು ಪ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ತದನಂತರ ತನ್ನನ್ನು ಪೋಲೀಸರು ದಾವಣಗೆರೆಯ ನ್ಯಾಯಾಧೀಶರ ಎದುರು ಹಾಜರುಪಡಿಸಿದ್ದು, ಅಲ್ಲಿಯೂ ಕೂಡ ತಾನು ನ್ಯಾಯಾಧೀಶರ ಸಮಕ್ಷಮ ಈಗ ಹೇಳಿದ ರೀತಿಯಲ್ಲಿಯೇ ಹೇಳಿಕೆಯನ್ನು ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ **?**

ಉತ್ತರಃ

ಪ್ರಶ್ನೆ -9 ಈ ಪ್ರಕರಣದಲ್ಲಿ ಪ್ರಾ.ಸಾ.8 ಡಾ.ವೇದಮೂರ್ತಿ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 02-01-2024 ರಂದು ಮದ್ಯಾಹ್ನ 3-03 ನಿಮಿಷದ ಅವಧಿಯಲ್ಲಿ ಪ್ರವೀಣ ಶರ್ಮ ಎನ್ನುವ 34 ವರ್ಷ ಪ್ರಾಯದ ಮಹಿಳೆಯು ತನ್ನ ಮೇಲೆ ತನ್ನ ಭಾವ ಹಲ್ಲೆ ಮಾಡಿದ್ದಾನೆ ಎನ್ನುವ ಇತಿಹಾಸದಲ್ಲಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದು, ಅವಳನ್ನು ಪರೀಕ್ಷಿಸಿದಾಗ ಆಕೆಯ ಬಲಕಣ್ಣಿನ ಮೇಲೆ ಗುದ್ದಿದ ಗಾಯ ಕಂಡುಬಂದಿರುತ್ತದೆ. ಆಕೆಯ ಬೆನ್ನಿನ

ಹಿಂದುಗಡೆ 7X1 ಸೆಂಮೀ ತರಚಿದ ಗಾಯ ಕಂಡುಬಂದಿರುತ್ತದೆ. ಅಲ್ಲದೇ ಆಕೆಯ ಎಡಕೈ ಮೇಲೆ 1X 1 ಸೆಂಮೀ ಗಾತ್ರದ ತರಚಿದ ಗಾಯ ಕಂಡುಬಂದಿರುತ್ತದೆ. ತನ್ನ ಅಭಿಪ್ರಾಯದಲ್ಲಿ ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿದ್ದು, ನಂತರ ತನಿಖಾಧಿಕಾರಿಯು ಗಾಯಾಳುವಿನ ಗಾಯದ ಪ್ರಮಾಣ ಪತ್ರ ಕೋರಿಕೊಂಡಿದ್ದು, ತಾನು ತಮ್ಮ ಆಸ್ಪತ್ರೆಯ ದಾಖಲೆಯನ್ನು ಪರಿಶೀಲಿಸಿ ನಿ.ಪಿ.23 ರಂತೆ ತನ್ನ ವರದಿಯನ್ನು ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ -10 ಮುಂದುವರೆದು ಪ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಅಲ್ಲದೇ ಅದೇ ಸಮಯದಲ್ಲಿ ವಿವೇಕ ಎನ್ನುವ 36 ವರ್ಷ ಪ್ರಾಯದ ಪುರುಷನು ಕೂಡ ತನ್ನ ಮೇಲೆ ತನ್ನ ಅಣ್ಣ ಹಲ್ಲೆ ಮಾಡಿದ್ದಾನೆ ಎನ್ನುವ ಇತಿಹಾಸದಲ್ಲಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದು, ಅವನನ್ನು ಪರೀಕ್ಷಿಸಿದಾಗ ಅವನ ಬಲ ಅಂಗೈ ಮೇಲೆ ಚರ್ಮ ಹರಿದ ರೀತಿಯ ಗಾಯ ಕಂಡುಬಂದಿರುತ್ತದೆ. ತನ್ನ ಅಭಿಪ್ರಾಯದಲ್ಲಿ ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿದ್ದು, ನಂತರ ತನಿಖಾಧಿಕಾರಿಯು ಗಾಯಾಳುವಿನ ಗಾಯದ ಪ್ರಮಾಣ ಪತ್ರ ಕೋರಿಕೊಂಡಿದ್ದು, ತಾನು ತಮ್ಮ ಆಸ್ಪತ್ರೆಯ ದಾಖಲೆಯನ್ನು ಪರಿಶೀಲಿಸಿ ನಿ.ಪಿ.24 ರಂತೆ ತನ್ನ ವರದಿಯನ್ನು ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ ?

ಉತ್ತರಃ

ಪ್ರಶ್ನೆಃ 11 ಮುಂದುವರೆದು ಪ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ತದನಂತರ ದಿಃ 08-02-2024 ರಂದು ತನಿಖಾಧಿಕಾರಿಯು ಮು.ಮಾ.1 ನ್ನು ಹಾಗೂ ರಾಸಾಯನಿಕ ವಿಶ್ಲೇಷಣಾ ವರದಿಗಳನ್ನು ಹಾಜರುಪಡಿಸಿ ನಿ.ಪಿ.23 ಮತ್ತು 24 ರಲ್ಲಿ ಆದ ಗಾಯಗಳು ಮು.ಮಾ.1 ರಿಂದ ಹಲ್ಲೆ ಮಾಡಿದಾಗ ಆಗಬಹುದೇ ಎಂದು ಕೋರಿಕೊಂಡಿದ್ದು, ತಾನು ಮು.ಮಾ.1 ನ್ನು ಪರಿಶೀಲಿಸಿ ಅದರಿಂದ ಹಲ್ಲೆ ಮಾಡಿದರೆ ನಿ.ಪಿ.23 ರ 2 ಮತ್ತು 3 ನೇ ಗಾಯ ಹಾಗೂ ನಿ.ಪಿ.24 ರ 1 ನೇ ಗಾಯ ಆಗಬಹುದು ಎಂದು ತನ್ನ ಪ್ರಮಾಣ ಪತ್ರ ನಿ.ಪಿ.26 ರಂತೆ ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ ?

ಉತ್ತರಃ

ಪ್ರಶ್ನೆಃ 12 ಈ ಪ್ರಕರಣದಲ್ಲಿ ಫ್ರಾ.ಸಾ.7 ಮಾಳವ್ವ ಇವರು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣದಲ್ಲಿ ದಿಃ 02-01-2024 ರಂದು ಸಂಜೆ 7-20 ಗಂಟೆಗೆ ತಾನು ಠಾಣೆಯಲ್ಲಿ ಇರುವಾಗ ಫ್ರಾ.ಸಾ.1 ರವರು ಠಾಣೆಗೆ ಆಗಮಿಸಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ ಠಾಣಾ ಗುನ್ನ ನಂ.1/2024 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ.ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ ?

ಉತ್ತರಃ

ಪ್ರಶ್ನೆ -13 ಮುಂದುವರೆದು ಫ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ನಂತರ ಮರುದಿನ ಘಟನಾ ಸ್ಥಳಕ್ಕೆ ಭೇಟಿಕೊಟ್ಟು ಆ ಪೂರ್ವದಲ್ಲಿ ಚಾ.ಸಾ.3 ಮತ್ತು 4 ರವರಿಗೆ ನೋಟೀಸು ನೀಡಿ ಅವರನ್ನು ಘಟನಾ ಸ್ಥಳಕ್ಕೆ ಬರಮಾಡಿಕೊಂಡು ಫ್ರಾ.ಸಾ.1 ರವರು ತೋರಿಸಿದ ಸ್ಥಳದಲ್ಲಿ ನಿ.ಪಿ.2 ರಂತೆ ಪಂಚನಾಮೆಯನ್ನು ಬರೆದು, ನಿ.ಪಿ.3 ರಿಂದ 7 ರಂತೆ ಪೋಟೋಗಳನ್ನು ತೆಗೆದಿರುತ್ತೇನೆ. ಅಲ್ಲದೇ ಆ ಸಮಯದಲ್ಲಿ ಫ್ರಾ.ಸಾ.1 ರವರು ಹಾಜರುಪಡಿಸಿದ ಮು.ಮಾ.1 ಮತ್ತು 3 ನ್ನು ಜಪ್ತುಪಡಿಸಿ ಅವುಗಳನ್ನು ಮು.ಮಾ.2 ಮತ್ತು 4 ರಲ್ಲಿ ಇಟ್ಟು ಅರಗು ಸೀಲು ಹಾಕಿ ತನ್ನ ಮತ್ತು ಪಂಚ ಸಾಕ್ಷಿದಾರರ ಸಹಿಯುಳ್ಳ ಚೀಟಿಯನ್ನು ಅವುಗಳಿಗೆ ಅಂಟಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ -14 ಮುಂದುವರೆದು ಫ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಅಲ್ಲದೇ ಆ ಸಮಯದಲ್ಲಿ ಫ್ರಾ.ಸಾ.3 ರಿಂದ 6 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಅವರುಗಳು ಕ್ರಮವಾಗಿ ನಿ.ಪಿ.10 ರಿಂದ 13 ರಂತೆ ತನ್ನ ಸಮಕ್ಷಮ ಹೇಳಿಕೆಗಳನ್ನು ನೀಡಿರುತ್ತಾರೆ. ಅದೇ ದಿನ ಚಾ.ಸಾ.12 ರವರು ಪೋಟೋಗಳನ್ನು ತೆಗೆದ ಕುರಿತಾಗಿ ನಿ.ಪಿ.16 ರಂತೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅಲ್ಲದೇ ಸಿಡಿಯನ್ನು ಕೂಡ ನೀಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆಃ 15 ಮುಂದುವರೆದು ಫ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಅಲ್ಲದೇ ಫ್ರಾ.ಸಾ.1 ರವರ 164 ಸಿಆರ್ ಪಿಸಿ ಹೇಳಿಕೆಯನ್ನು ದಾಖಲಿಸಿಕೊಳ್ಳುವಂತೆ ನ್ಯಾಯಾಲಯಕ್ಕೆ ನಿವೇದನೆಯನ್ನು ಸಲ್ಲಿಸಿರುತ್ತೇನೆ. ಅಲ್ಲದೇ ಸದರಿ ಹೇಳಿಕೆಯನ್ನು ದಾಖಲಿಸಿಕೊಂಡ ಬಳಿಕ ಅದರ

ಪ್ರತಿಯನ್ನು ಕೂಡ ಪಡೆದುಕೊಂಡಿರುತ್ತೇನೆ. ಅಲ್ಲದೇ ವಶಪಡಿಸಿಕೊಂಡ ಮು.ಮಾ.1 ಮತ್ತು 3 ನ್ನು ಸಿಬ್ಬಂದಿಯೊಂದಿಗೆ ರಾಸಾಯನಿಕ ವಿಶ್ಲೇಷಣೆಗಾಗಿ ಕಳುಹಿಸಿಕೊಟ್ಟು ಆ ಕುರಿತು ಸ್ವೀಕೃತಿಯನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆಃ 16 ಮುಂದುವರೆದು ಫ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಅಲ್ಲದೇ ಚಾ.ಸಾ.9 ರವರಿಂದ ಫ್ರಾ,ಸಾ.1 ಮತ್ತು 2 ರವರ ಗಾಯಾಳುವಿನ ಗಾಯದ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿರುತ್ತೇನೆ. ಅಲ್ಲದೇ ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಕೂಡ ಪಡೆದುಕೊಂಡಿರುತ್ತೇನೆ. ಅಲ್ಲದೇ ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಹಾಗೂ ಮು.ಮಾ.1 ನ್ನು ಚಾ.ಸಾ.9 ರವರ ಸಮಕ್ಷಮ ಹಾಜರುಪಡಿಸಿ ಅವರಿಂದ ಅಂತಿಮ ಅಭಿಪ್ರಾಯ ಕೋರಿ ಮನವಿ ಸಲ್ಲಿಸಿದ್ದು, ಅವರು ಪರಿಶೀಲಿಸಿ ತಮ್ಮ ಅಭಿಪ್ರಾಯ ನೀಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ -17 ಮುಂದುವರೆದು ಫ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಅಲ್ಲದೇ ಘಟನಾ ಸ್ಥಳದ ಖಾತಾ ಉತಾರಗಳನ್ನು ಮಹಾನಗರ ಪಾಲಿಕೆಯಿಂದ ಪಡೆದುಕೊಂಡಿರುತ್ತೇನೆ. ಅಲ್ಲದೇ ಫ್ರಾ.ಸಾ.1 ಮತ್ತು 2 ರವರ ರಕ್ತದ ಗುಂಪಿನ ದಾಖಲೆ ಕೂಡ ಪಡೆದುಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆಃ 18 ಮುಂದುವರೆದು ಫ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಅಲ್ಲದೇ ದಿಃ 02-01-2024 ರಂದು ಆರೋಪಿಯಾದ ನಿನ್ನನ್ನು ಪತ್ತೆ ಹಚ್ಚಿ ಬರುವಂತೆ ಚಾ.ಸಾ.13 ಮತ್ತು 14 ರವರಿಗೆ ಆದೇಶ ಮಾಡಿದ್ದು, ಅವರು ಆರೋಪಿಯಾದ ನಿನ್ನನ್ನು ವಶಕ್ಕೆ ಪಡೆದು ತನ್ನ ಸಮಕ್ಷಮ ವರದಿಯೊಂದಿಗೆ ಹಾಜರುಪಡಿಸಿರುತ್ತಾರೆ. ಆ ಕುರಿತು ಚಾ.ಸಾ.13 ಮತ್ತು 14 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಅಲ್ಲದೇ ಆರೋಪಿಯಾದ ನಿನ್ನನ್ನು ದಸ್ತಗಿರಿ ಮಾಡಿ ನಿನ್ನ ಹೇಳಿಕೆಯನ್ನು ದಾಖಲಿಸಿಕೊಂಡು ವೈದ್ಯಕೀಯ ತಪಾಸಣೆ ಆದ ಬಳಿಕ ಆತನನ್ನು ನ್ಯಾಯಾಲಯಕ್ಕೆ ರಿಮಾಂಡ್ ವರದಿಯೊಂದಿಗೆ ಹಾಜರುಪಡಿಸಿರುತ್ತೇನೆ. ನಂತರ ತನಿಖೆ ಪೂರ್ಣಗೊಂಡಿದ್ದು, ಆರೋಪಿಯಾದ ನಿನ್ನ ವಿರುದ್ಧ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷಿ

ನುಡಿದಿರುತ್ತಾರೆ. ಆ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ-19 ನಿಮ್ಮ ಪರವಾಗಿ ಏನಾದರೂ ಹೇಳುವುದು ಇದೆಯೇ?

ಉತ್ತರಃ

ಪ್ರಶ್ನೆ-20 ನಿಮ್ಮ ಪರ ಸಾಕ್ಷಿ ಮಾಡಿಸುವಿರಾ?

ಉತ್ತರಃ

(ಈ ಮೇಲೆ ಹೇಳಿದ ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ತೆಗೆದುಕೊಂಡಿದ್ದು, ಅದು ಆರೋಪಿಯು ನೀಡಿದ ನಿಜವಾದ ಹೇಳಿಕೆಯಾಗಿರುತ್ತದೆ ಎಂದು ದೃಢೀಕರಿಸುತ್ತೇನೆ)

ಇಂದು 13 ನೇ ತಾರೀಖು ಮಾರ್ಚ್ 2026.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.